ನೀಡಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಅವರು ಕೊಟ್ಟಂಥ ಸಲಹೆ ಒಳ್ಳೆಯದು ಇದೆ. ಆದರೆ ಹಣದ ಲಭ್ಯತೆ ನೋಡಿಕೊಂಡು ಈ ಕೆಲಸವನ್ನು ಮಾಡಬೇಕಾಗಿದೆ. ವಿಶೇಷವಾಗಿ ಎಲ್ಲಿ ಹೆಚ್ಚಿನ ಅಪಘಾತವಾಗುತ್ತಿದೆ ಅಂಥ ತಿರುವುಗಳಲ್ಲಿ PWD ಇಲಾಖೆಗೆ ನಾವು ಸೂಚಿಸಿ ಆ ಕ್ರಮವನ್ನು ಜರುಗಿಸುತ್ತೇವೆ.

ಅಧ್ಯಕ್ಷರು : ಶ್ರೀ. ಕೆ. ಎಸ್. ಈಶ್ವರಪ್ಪನವರ ಪ್ರಶ್ನೆಗೆ ಒಂದು ವಾರದ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ದಯವಿಟ್ಟು ತಾವು ನಾನು ಕೇಳಿದಂಥ ಆ ಪ್ರಶ್ನೆಯನ್ನು ಓದಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸದಸ್ಯರು ಕೇಳಿದಂಥ ಪ್ರಶ್ನೆಗಳಿಗೆ ಉತ್ತರವನ್ನು ಕೊಡದಿದ್ದರೆ privilege ಆಗುತ್ತದೆಂದು ನಿನ್ನೆಯ ದಿವಸ ತಾವೇ ಹೇಳಿದಿರಿ. ಈಗ ನೀವೇ ಎರಡು ಪ್ರಶ್ನೆಗೆ ಕಾಲಾವಕಾಶ ಕೇಳಿದ್ದೀರಿ. ಇದು ಹೇಗೆ? ಪ್ರಶ್ನೋತ್ತರಕ್ಕೆ ಏನಾದರೂ ಬೆಲೆ ಉಂಟೇ ?

ಅಧ್ಯಕ್ಷರು : ಈಗ ನಾನು ಹೇಳುವುದನ್ನು ಕೇಳಿ. ನಾನು ಏನು ಹೇಳಿದ್ದೆ ಎಂದರೆ, ಅವರು ನಿಗದಿತ ಅವಧಿಯಲ್ಲಿ ಉತ್ತರ ಕೊಡಲೇ ಬೇಕು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಒಂದು ವಾರ ಸದನ ನಡೆಯುತ್ತದೆಯೇ ?

(ಗೊಂದಲ)

ಶ್ರೀ ಬಿ. ಎಸ್.ಯಡಿಯೂರಪ್ಪ : ಸದರಿ ಪ್ರಶ್ನೆಗೆ ಸಂಬಂಧಿಸಿದಂತೆ ಇದರಲ್ಲಿ 50 ಲಕ್ಷ ರೂಪಾಯಿಗಳಷ್ಟು ದುರುಪಯೋಗವಾಗಿರುವಂಥದ್ದು ತನಿಖೆ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಈ ಬಗ್ಗೆ ರಿಪೋರ್ಟ್ ಇದೆ. ಈ ರಿಪೋರ್ಟ್ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಒಂದು Sentence ನಲ್ಲಿ ಉತ್ತರ ಕೊಡುವುದು ಬಿಟ್ಟು ಒಂದು ವಾರ ಕಾಲಾವಕಾಶ ಬೇಕೆಂದು ಕೇಳಿದರೆ ಇನ್ನೂ ಒಂದು ವಾರ ಸದನ ನಡೆಯುತ್ತದೆಯೇ ?

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಯಾವ ಹಳ್ಳಿಯಿಂದ ಇವರು information ತರಿಸಿಕೊಳ್ಳಬೇಕಾಗಿದೆ ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಭ್ರಷ್ಟರಿಗೆ ರಕ್ಷಣೆ ಮಾಡುವುದು ಸರ್ಕಾರದ ಕೆಲಸವೇ ? ಹೋಗಲಿ, ಈ ಪ್ರಶ್ನೆ ನೋಡಿ ಸರ್.

ಅಧ್ಯಕ್ಷರು : ಶ್ರೀ ಯಡಿಯೂರಪ್ಪನವರೇ, ನಾನು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಿದ್ದೇನೆ. ಮಂತ್ರಿಗಳು ಅಧಿಕಾರಿಗಳು ಏನು ಹೇಳುತ್ತಾರೆ ಅದನ್ನು ಇದು ಮಾಡಬಾರದೆಂದು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಭ್ರಷ್ಟರಿಗೆ ರಕ್ಷಣೆ ! ಭ್ರಷ್ಟರಿಗೆ ರಕ್ಷಣೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಾರೆ. ಅದಕ್ಕೆ 'ಉಂಟು' ಅಥವಾ 'ಇಲ್ಲ' ಎಂದು ಹೇಳಿದರೆ ಆಯಿತು. ಇಷ್ಟು ಹೇಳುವುದಕ್ಕೆ ಅವರಿಗೆ 3 ತಿಂಗಳ ಸಮಯ ಬೇಕೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇಷ್ಟು ಮಾಹಿತಿ ತರಿಸುವುದಕ್ಕೆ ಏನು ಕಷ್ಟ ?

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : ದಯವಿಟ್ಟು ಪ್ರಶ್ನೆಯನ್ನು ತಾವೇ ಓದಿ ಬಿಡಿ ಸರ್. ಆ ಪ್ರಶ್ನೆ ಬಹಳ ಕಷ್ಟದ್ದು, ಅದಕ್ಕೆ ಉತ್ತರವನ್ನು ಕಲೆಕ್ಟ್ ಮಾಡುವುದಕ್ಕೆ ತಿಂಗಳುಗಟ್ಟಲೆ ಸಮಯ ಬೇಕೆನ್ನುವುದಾದರೆ ನನ್ನದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು : ಪತ್ರಗಾರ ಇಲಾಖೆಯಲ್ಲಿ ಕಡತಗಳ ಗಣಕೀಕರಣದ ಕಾಮಗಾರಿಯಲ್ಲಿ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಕೊಡಲು ಒಂದು ವಾರ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಹಾಗಲ್ಲ ಸರ್.

ಅಧ್ಯಕ್ಷರು : ಮುಖ್ಯಮಂತ್ರಿಗಳು ಬರಲಿ.

ಶ್ರೀ ಕೆ. ಎಸ್. ಈಶ್ವರಪ್ಪ : ನನ್ನ ಪಾಯಿಂಟ್ ಅದಲ್ಲ.

ಶ್ರೀ ಎ. ಎಸ್. ಬಸವರಾಜು : ಮಾನ್ಯ ಅಧ್ಯಕ್ಷರೇ, 10 ನೇ ತಾರೀಕಿನ ತನಕ ಸದನವನ್ನು ಮುಂದುವರಿಸುವುದಾದರೆ ಈ ಪ್ರಶ್ನೆಗೆ ಒಂದು ವಾರ ಕಾಲಾವಕಾಶವನ್ನು ಕೊಡಿ.

ಅಧ್ಯಕ್ಷರು : ಹಾಗೆ ಆಗುವುದಿಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಈಗ ನಾನು ಕೇಳುವುದಕ್ಕೆ 03–03–2004 ರಲ್ಲಿ ಇಲಾಖೆ ಒಂದು ವರದಿ ಕೊಟ್ಟಿದೆ. ಈ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದೆಯೇ ಇಲ್ಲವೋ ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಒಂದು ವಾರ ಕಾಲಾವಕಾಶ ಬೇಕೇ ?

ಅಧ್ಯಕ್ಷರು : ನಾನು ನಿಮಗೆ ಹೇಳುವುದೇನೆಂದರೆ, ನಾಳೆಯ ದಿವಸ ಸದನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇರುತ್ತಾರೆ. ಅವರ ಎದುರಿಗೆ ಆ ಪ್ರಶ್ನೆಯನ್ನು ಪ್ರಶ್ನೋತ್ತರ ಅಲ್ಲದಿರುವ ಸಮಯದಲ್ಲಿ ಯಾವಾಗಲಾದರೂ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಮಗೆ ಅವಕಾಶ ಕೊಡುತ್ತೇನೆ. ತಾವು ಈಗ ಕುಳಿತುಕೊಳ್ಳಿ. ಈ ಪ್ರಶ್ನೆಯನ್ನು ಅವರಿಗೆ Post ಮಾಡಿದ್ದೇನೆ.

: 3632

: ಶ್ರೀ ರಾಜೇಂದ್ರನ್. ಎಸ್. (ಕೆ.ಜಿ.ಎಫ್)

: ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಕೋಲಾರದ ಕಂಬಾಲಪಲ್ಲಿನ ದುರ್ಘಟನೆಯಲ್ಲಿ ಮಡಿದವರ ಕುಟುಂಬದವರಿಗೆ ಸರ್ಕಾರ ನೀಡಿರುವ ಆಶ್ವಾಸನೆಯಂತೆ ಒದಗಿಸುವ ಪರಿಹಾರಗಳು ಯಾವುವು ;	ಕೋಲಾರದ ಕಂಬಾಲಪಲ್ಲಿನ ದುರ್ಘಟನೆಯಲ್ಲಿ ಮಡಿದವರ ಕುಟುಂಬದವರಿಗೆ ಸರ್ಕಾರವು ಈ ಕೆಳಗಿನಂತೆ ಪರಿಹಾರ ನೀಡಿರುತ್ತದೆ. 1) ಏಳು ಕುಟುಂಬ ವರ್ಗದವರಿಗೆ ತಲಾ ರೂ. 1.5 ಲಕ್ಷದಂತೆ ಒಟ್ಟು ರೂ.10.5 ಲಕ್ಷಗಳ ಪರಿಹಾರ ನೀಡಲಾಗಿದೆ. 2) ಒಂದು ಕುಟುಂಬದವರಿಗೆ ರೂ.1 ಲಕ್ಷ, ವಾಸಕ್ಕೆ ಒಂದು ಮನೆ ಮತ್ತು ಸರ್ಕಾರಿ ನೌಕರಿಯನ್ನು ನೀಡಲಾಗಿರುತ್ತದೆ. 3) ಅಲ್ಲದೇ ಈ ಘಟನೆಯಲ್ಲಿ ನೊಂದ ಒಟ್ಟು 69 ಸಂತ್ರಸ್ಥರಿಗೆ ವಸತಿ ಗೃಹಗಳನ್ನು ನಿರ್ಮಿಸಿ ಪುನರ್‌ವಸತಿಯನ್ನು ಕಲ್ಪಿಸಲಾಗಿರುತ್ತದೆ.